Allotment of houses by C.I.T.B. Mysore

815 SRI M. B. RAMASWAMY (Anekal).—Will the Minister for Law and Municipal Administration be pleased to state.—

(*a*) whether it is a fact that City Improvement Trust Board, Mysore had called for application for allotment of 202 houses during February 1976.

(*b*) whether it is not a fact that no concessional facilities had been given to Scheduled Castes/Scheduled Tribes and other weaker section applicants. with regard to allotment of houses in City Improvement Trust Board. Mysore ?

SRI H. M. CHANNABASAPPA.—(Minister for Public Works) [On behalf of Sri D. K, Naikar Minister for Law and Municipal Administration].

(*a*) Yes,

(*b*) Yes, it is a fact.

ಶ್ರೀ ಎಂ. ಬಿ. ರಾಮಸ್ವಾಮಿ, —ಮೈಸೂರಿನ ನಗರಾಭಿವೃದ್ಧಿ ಮಂಡಲಿಯವರು ಮನೆಗಳನ್ನು ಹಂಚುವಾಗ 20 ಅಂಶಗಳ ಕಾರ್ಯಕ್ರಮಗಳಲ್ಲಿ ಈ ವಿಚಾರಕ್ಕೆ ಹೆಚ್ಚಿನ ಒಂದು ಪ್ರಧಾನ್ಯತೆ ಕೊಟ್ಟಿದ್ದರೂ ಇದರಲ್ಲಿ ಹರಿಜನ, ಗಿರಿಜನರಿಗೆ ಬಹುಭಾಗ ಪ್ರಾತಿನಿಧ್ಯಕೊಡಬೇಕೆಂದು ಹೇಳಿದ್ದರೂ ಹಿಂದುಳಿದ ಜನಾಂಗಗಳಿಗೂ ಮತ್ತು ಅಲ್ಪಸಂಖ್ಯಾತರಿಗೂ ಅವನ್ನು ಕೊಟ್ಟಿಲ್ಲದೇ ಇರುವುದರಿಂದ ಅವರಿಗೂ ಕೂಡ ಇನ್ನುಮುಂದೆ ಹೆಚ್ಚಿನ ಅವಕಾಶವನ್ನು ಮಾಡಿ ಕೊಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಷೆಡ್ಯೂಲ್ಡ್ ಕ್ಯಾಸ್ಟ್ ಜನರು ಎಷ್ಟು ಜನ ಆರ್ಜಿಗಳನ್ನು ಕೊಟ್ಟಿದ್ದರೋ ಅಷ್ಟು ಜನರಿಗೂ ಮನೆಗಳನ್ನು ಹಂಚಲಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಅವರಲ್ಲಿ ಕೆಲವು ಜನ ಅಲ್ಪ ಸಂಖ್ಯಾತರು ನೀವು ನಿಗದಿ ಮಾಡತಕ್ಕ ದುಡ್ಡನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಆ ಒಂದು ನಿಮ್ಮ ನೀತಿಯನ್ನು ಬದಲಾವಣೆ ಮಾಡಿ ಸುಲಭವಾಗಿ ಅವರಿಗೆ ಮನೆಗಳು ಸಿಗುವ ರೀತಿಯಲ್ಲಿ ಏನಾದರೂ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನೆಗಳನ್ನು ಕಟ್ಟಿ ಆ ಮನೆಗಳನ್ನು ಕೊಡುವ ಜವಾಬ್ದಾರಿ ಒಂದು ಅಬ್ಲಿಗೇಟರಿ ಡ್ಯೂಟಿ ಅಲ್ಲ. ಅವರಿಗೆ ಮನೆಗಳನ್ನು ಕಟ್ಟತಕ್ಕದ್ದು ಜವಾಬ್ದಾರಿ ಕೊಟ್ಟ ಮೇಲೆ ಅದನ್ನು ಅವರು ಮಾಡತಕ್ಕದ್ದು ಅವರ ಕರ್ತವ್ಯ. ಅದೇ ಸರ್ಕಾರದ ಮೂಲೋದ್ದೇಶ ಕೆಲವು ಜನರು ಏನಾದರೂ ರಿಪ್ರೆಸೆಂಟ್ ಆದರೆ ಅಂತಹವರಿಗೆ ಸಹಾಯಮಾಡಬೇಕೆಂಬ ಉದ್ದೇಶದಿಂದ ಈ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಈಗ ಏನು 202 ಮನೆಗಳನ್ನು ಅಲ್ಲಿ ಕಟ್ಟಿದ್ದಾರೆಯೋ ಅದು ಅವರ ಕೊಡುವ ಹಣಕ್ಕೆ ಸರಿಯಾಗಿಯೇ ಕಟ್ಟಿದ್ದಾರೆ. ಒಂದುವೇಳೆ ಸರ್ಕಾರ ಹರಿಜನ ಗಿರಿಜನರಿಗೆ ರಿಯಾಯಿತಿ ದರದಲ್ಲಿ ಅವನ್ನು ಕೊಡಬೇಕೆಂದರೆ, ಅದಕ್ಕೆ ಸರ್ಕಾರ ಸಬ್ಸಿಡೈಸ್ ಮಾಡಿದರೆ ಅದರ ಬಗ್ಗೆ ಏನೂ ಅಭ್ಯಂತರವಿಲ್ಲ. ನೊ ಲಾಸ್ ನೊ ಪ್ರಾಫಿಟ್ ಬೇಸಿಸ್ ಮೇಲೆ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನೊ ಲಾಸ್, ನೊ, ಪ್ರಾಫಿಟ್ ಮೇಲೆ ಮಾಡಲಾಗಿದೆಯೆಂದು ಉತ್ತರ ಹೇಳಿದಿರಿ. ಇಲ್ಲಿ ಯಾವ ರೀತಿಯಲ್ಲಿ ಎರಡು ಭಾಗವಾಗಿ ಮಾಡುತ್ತೀರಿ ? ಹರಿಜನ, ಗಿರಿಜನರಿಗೆ ಇಷ್ಟಿಷ್ಟು ದಿವಸ ಸ್ಟೈಪಂಡ್‌ಗಳನ್ನು ಕೊಡುವ ವಿಷಯದಲ್ಲಿ ಇವರ ಒಂದು ಅಧಿಕಾರವನ್ನು ಈಗ ಬಿ. ಡಿ. ಓ. ಗೆ. ಕೊಟ್ಟಿದ್ದೀರಿ. ಇದರ ಪ್ರಕಾರ ಅವರಿಗೆ ಕಡಿಮೆ ಬೆಲೆಯಲ್ಲಿ ಅವನ್ನು

ಕೊಡಬೇಕೆಂದು ತೀರ್ಮಾನ ಮಾಡಿ ಕೊಟ್ಟಿದ್ದೀರಿ. ಆದ್ದರಿಂದ ಅದೇ ರೀತಿಯಲ್ಲಿ ಇಲ್ಲಿಯು ಸಹ ಕಡಿಮೆ ಬೆಲೆಯಲ್ಲಿ ಅವರಿಗೆ ಕೊಡುವುಕ್ಕೆ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸುವುದಕ್ಕೆ ಸಾಧ್ಯವೇ ? ಅವರಿಗೆ ಸಬ್ಸಿಡಿಯನ್ನು ಕೊಡುವುದಕ್ಕೆ ಸರ್ಕಾರ ಒಪ್ಪುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸಿ.ಐ.ಟಿ.ಬಿ. ಅವರ ಆಬ್ಲಿಗೇಟರಿ ಡ್ಯೂಟಿಯಲ್ಲ, ಒಂದು ವೇಳೆ ಸರ್ಕಾರ ಸಬ್ಸಿಡಿ ಕೊಟ್ಟರೆ, ಸಿ.ಐ.ಟಿ.ಬಿ. ಅವರ ಜಬ್‌ಜೆಕ್ಷನ್ ಏನೂ ಇಲ್ಲ.

It is not one of the obligatory duties of the CITB Mysore to take up housing programme and solve the problems of houseless people The primary consideration for taking up the housing works was to find accommodation for the people who have been displaced during the course of the CITB's expansion programme and secondary consideration was to encourage people to go out of the congested area and relieve the congestion in the congested areas. If Government gives a direction that they are prepared to give subsidy the CITB has no objection to take up the housing work. At the Government level we will exmine it.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮೈಸೂರು ಸಿ.ಐ.ಟಿ.ಬಿ. ಯವರಿಗೆ ಅಲಾಟ್‌ಮೆಂಟ್ ರೂಲ್ಸ್ ಇದ್ದಿಲ್ಲ. ಆದರೆ ಬೆಂಗಳೂರಿನಲ್ಲಿ ಸಿ. ಐ. ಟಿ. ಬಿ. ಅವರಿಗೆ ಕೆಲವಾರು ನಿಯಮಗಳು ಇದರ ಬಗ್ಗೆ ಇವೆ. ಅಲಾಟ್‌ಮೆಂಟ್ ರೂಲ್ಸ್ ಬಗ್ಗೆ ಲಿಬರಲೈಜ್ಡ್ ಸ್ಕೀಂ ಇದೆ. ಅದರ ಪ್ರಕಾರ ವೀಕರ್ ಸೆಕ್ಷನ್ಸ್‌ಗೆ ಕೆಲವು ಉದ್ದೇಶಗಳಿಂದ ರಿಯಾಯಿತಿಯನ್ನು ಇಲ್ಲಿ ಕೊಟ್ಟಿದ್ದೀರಿ ಅಂದಮೇಲೆ ಅದೇ ತರಹ ರಿಯಾಯಿತಿಯನ್ನು ಇಲ್ಲಿ ಅಳವಡಿಸುವುದಕ್ಕೆ ಸೂಕ್ತ ಏರ್ಪಾಡುಮಾಡುತ್ತೀರಾ ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಅಲಾಟ್‌ಮೆಂಟ್ ಆಫ್ ಹೌಸಸ್‌ಗೆ ರೂಲ್ಸ್ ಇಲ್ಲವೆಂದು ನಾನು ಮೊದಲೇ ಹೇಳಿದ್ದೇನೆ. ಆದ್ದರಿಂದ ಮಾನ್ಯ ಶ್ರೀ ಕೃಷ್ಣನ್ ಅವರು ಕೇಳಿದ ಪ್ರಶ್ನೆಗೆ ಹೇಳಿದ ಉತ್ತರವನ್ನೇ ಈ ಪ್ರಶ್ನೆಗೂ ಹೇಳಬೇಕಾಗುತ್ತದೆ

ಶ್ರೀ ಎಂ. ಬಿ. ರಾಮಸ್ವಾಮಿ — ಈಗ ಮನೆಗಳನ್ನು ಎಷ್ಟೋಜನ ಹರಿಜನರಿಗೆ ಅಲಾಟ್ ಮಾಡಿದ್ದೀರಿ ಆದರೆ ಬಹುಭಾಗದ ಜನರು ದುಡ್ಡನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದ್ದಾರೆ. ಸ್ಪಿಪುಲೇಟೆಡ್ ಪಾರ್ಟೀಸ್ ದುಡ್ಡನ್ನು ಇನ್‌ಸ್ಟ್ರೈಂ ಕಟ್ಟಿಲ್ಲವೆಂದು ಅವರ ಅಲಾಟ್‌ಮೆಂಟ್‌ಗಳನ್ನು ವಜಾ ಮಾಡಿದ್ದಾರೆ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ರೂಲ್ಸ್‌ನ್ನು ಸಡಿಲಮಾಡಿ ಹರಿಜನ, ಗಿರಿಜನರಿಗೆ ಇದರ ಬಗ್ಗೆ ಹೆಚ್ಚಿನ ಸಹಾಯಮಾಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಅಧ್ಯಕ್ಷರು.—ಅಂದರೆ ಪುಕಸಟೆಯಾಗಿ ಅವರಿಗೆ ಕೊಡಬೇಕೆಂದು ಹೇಳುತ್ತೀರಾ ?

ಶ್ರೀ ಎಂ. ಬಿ. ರಾಮಸ್ವಾಮಿ.—ಪುಕಸಟೆ ಬೇಡ. ಇನ್‌ಸ್ಟಾಲ್‌ಮೆಂಟ್ ರೀತಿಯಲ್ಲಿ ಕೊಡಲಿ. ಲಂಪ್‌ಸಮ್‌ವಾಗಿ ೫ಸಾವಿರ, ೧೦ಸಾವಿರ, ೧೫ಸಾವಿರ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಯಾರಿಗೆ ಆ ರೀತಿ ಡಿಪಾಜಿಟ್ ಕಟ್ಟುವುದಕ್ಕಾಗುವುದಿಲ್ಲವೋ ಅಂತಹವರಿಗೆ ಇನ್‌ಸ್ಟಾಲ್‌ಮೆಂಟ್ ರೀತಿಯಲ್ಲಿ ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಸೈಟುಗಳನ್ನು ಕೊಡತಕ್ಕದ್ದರಲ್ಲಿ ಎಲ್ಲಾ ರಿಯಾಯಿತಿಗಳನ್ನು ಕೊಟ್ಟಿದ್ದೇವೆ. ಆದರ ಬಗ್ಗೆ ೧೯೭೨ರಲ್ಲಿಯೇ ರೂಲ್ಸ್ ಮಾಡಿದ್ದೇವೆ. ಬೆಂಗಳೂರು ಮತ್ತು ಮೈಸೂರಿಗೆ ಅದನ್ನು ಅಪ್ಲೈ ಮಾಡಿದ್ದಾರೆ. ಆದರೆ ಮನೆಗಳ ವಿಷಯದಲ್ಲಿ ರೂಲ್ಸ್ ಇಲ್ಲ.

I am telling you there are no rules in regard to allotment of Houses. There are rules only in the matter of allotment of sites. Sites are diff rent from houses. Could you please und rstand this ?

MADAM SPEAKER.—Now question Hour is over,